SHORT NOTICE QUESTION AND ANSWER

Theft of perfumes in Government Soap Factory

27. Sri N. A. CHANNE GOWDA (Pandavapur).—

Sri S. CHANDRAKANTH (Bidar).—

Will the Minister for Industries, Information and Publicity be pleassd to state :—

(*a*) whether a theft of 30 Kgs. of blended perfumes took place in the Mysore Government Soap Factory, Bangalore in early part of August 1969 ;

(*b*) if so, the action Government has taken in this regard ;

(*c*) whether 20 Boxes of special Sandal Soap were stolen in the same factory ;

(*d*) if so, what action Government has taken in the matter ?

Sri M. RAJASEKHARA MURTHY (Minister for Industries, Information and Publicity).—

(*a*) Yes. 27 Kgs. are found missing.

(*b*) A complaint has been lodged with the Police for investigating.

(*c*) No.

(*d*) Does not arise in view of reply to part (*c*) of the question.

ಶ್ರೀ ಎನ್. ಎ. ಚನ್ನೇಗೌಡ.—ಶ್ರೀಗಂಧದ ಮಿಶ್ರಣ ಎಂದು ಕಳುವಾಯಿತು ? ಒಂದು ಕೆ.ಜಿ.ಗೆ ಎಷ್ಟು ಬೆಲೆಯಾಗುತ್ತದೆ ಮತ್ತು ಅದನ್ನು ಯಾವ ಸಾಮಾನುಗಳನ್ನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಾರೆ ?

† ಶ್ರೀ ಎಂ. ರಾಜಶೇಖರ ಮೂರ್ತಿ.—27 ಕೆ.ಜಿ.ಗೆ ನಾಲ್ಕು ಸಾವಿರ ರೂಪಾಯಿ ಬೆಲೆಯಾಗುತ್ತದೆ. 14ನೇ ತಾರೀಖು ಕಾರ್ಖಾನೆಯನ್ನು ಮುಚ್ಚಿದಾಗ 27 ಕೆ.ಜಿ. ಶ್ರೀಗಂಧದ ಮಿಶ್ರಣವನ್ನು ಇಟ್ಟಿದ್ದರು. 15ನೇ ಆಗಸ್ಟ್ ರಜ ಇತ್ತು. 16 ನೇ ತಾರೀಖು ಬೆಳಿಗ್ಗೆ 8 ಗಂಟೆಗೆ ನೋಡಿದಾಗ ಮಾಲು ಇರಲಿಲ್ಲ. ಅಲ್ಲಿರುವವರನ್ನು ಎನ್‌ಕ್ವೈರಿ ಮಾಡಿದರು. ಏನೂ ಸುಳಿವು ಗೊತ್ತಾಗದ್ದರಿಂದ ಪೋಲೀಸರಿಗೆ ದೂರು ಕೊಟ್ಟರು. ಶ್ರೀಗಂಧದ ಮಿಶ್ರಣವನ್ನು ಸಾಬೂನು ತಯಾರು ಮಾಡುವುದಕ್ಕೆ ಉಪಯೋಗಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಇನ್‌ವೆಸ್ಟಿಗೇಷನ್ ನಡೆಯುತ್ತಿದೆ ಎಂದು ಹೇಳಿದ್ದಾರೆ. ಎಷ್ಟು ದಿವಸದಲ್ಲಿ ಮುಗಿಯುತ್ತದೆ ?

ಶ್ರೀ ಎಂ. ರಾಜಶೇಖರ ಮೂರ್ತಿ.—16ನೇ ತಾರೀಖು ಮೊದಲು ಇನ್‌ವೆಸ್ಟಿಗೇಟ್ ಮಾಡಿದೆವು ಆ ನಂತರ ಪೋಲೀಸ್ ಕಂಪ್ಲೇಟ್ ಕೊಟ್ಟಿದೆ, ಅವರು ಎನ್‌ಕ್ವೈರಿ ಮಾಡುತ್ತಾ ಇದ್ದಾರೆ.

ಶ್ರೀ ಪಿ. ಎನ್. ಪಾಟೀಲ್.—ನಾಲ್ಕು ಸಾವಿರ ರೂಪಾಯಿ ಸುಗಂಧ ದ್ರವ್ಯ ಸರ್ಕಾರಿ ಸಾಬೂನು ಕಾರ್ಖಾನೆಯಲ್ಲಿ ಕಳುವಾಯಿತು ಎಂದು ಕೊಟ್ಟಿರುವ ದೂರಿನಲ್ಲಿ ಏನಿದೆ, ಯಾರ ಮೇಲಾದರೂ ಸಂಶಯವಿದೆ ಎಂದು ದೂರು ಕೊಡಲಾಗಿದೆಯೇ ? ಬಳೀ ಆನೆಗಳು ತಿಂದು ಹಾಕಿದ್ದು ನಾಲ್ಕನೇ ದರ್ಜೆ ಕೆಲಸಗಾರರನ್ನು ಬಲಿ ಕೊಡುತ್ತೀರಾ ? 20 ಕೇಸು ಸ್ಪೆಷಲ್ ಕ್ವಾಲಿಟಿ ಸೋಪು ಕಳುವಾಗಿದೆಯೇ ಎಂದರೆ 'ಇಲ್ಲ' ಎಂದು ಹೇಳಿದ್ದೀರಿ. ಹಿಂದೆ ಬೆಂಗಳೂರು ಡೈರಿಯಲ್ಲಿ ಬೆಣ್ಣೆಯಿಂದ ನಷ್ಟವಾಗಿಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿ ಆ ನಂತರ 80 ಸಾವಿರ ರೂಪಾಯಿ ಬೆಲೆ ಬಾಳುವ ಬೆಣ್ಣೆಯನ್ನು ಸುಡಲಾಯಿತು ಎಂದು ಹೇಳಿದ ಹಾಗೆ ಇಲ್ಲಿಯೂ ಹೇಳುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಸೋಪು ಕಳುವಾಯಿತು ಎನ್ನುವುದು ಸತ್ಯಾಂಶಕ್ಕೆ ದೂರ ವಾದ ವಿಚಾರ. ಪೋಲೀಸರಿಗೆ ಕೊಟ್ಟಿರುವ ದೂರಿನಲ್ಲಿ ಇಂಥವರೇ ಕದ್ದಿದ್ದಾರೆ ಎಂದು ದೂರು ಕೊಟ್ಟಿಲ್ಲ; ಕಳುವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಎಂ. ನಾಗಪ್ಪ.—ಬ್ಲೆಂಡೆಡ್ ಪರ್‌ಫ್ಯೂಮ್ ಮೈಸೂರು ಸ್ಯಾಂಡಲ್ ಸೋಪ್ ತಯಾರು ಮಾಡುವುದಕ್ಕೆ ಮಾತ್ರ ಉಪಯೋಗವಾಗುತ್ತದೆ, ಬೇರೆ ಕೆಲಸಗಳಿಗೆ ಬರುವುದಿಲ್ಲ. ಅಂದ ಮೇಲೆ ಇಂಥದೇ ಸೋಪ್ ತಯಾರು ಮಾಡುವ ಕಾರ್ಖಾನೆ ಬೇರೆ ಯಾವುದಾದರೂ ಇದ್ದು, ಅಂಥವರು ಇದನ್ನು ಖರೀದಿ ಮಾಡಿರಬಹುದು ಎಂದು ನನಗೆ ತೋರುತ್ತದೆ. ಅಂಥ ಯಾವುದಾದರೂ ಕಾರ್ಖಾನೆ ಇದೆಯೇ, ಇದ್ದರೆ ಅದರ ಹೆಸರನ್ನು ತೋರಿಸಿದ್ದೀರಾ ? ಹಿಂದೆ ತೋರಿಸದೆ ಇದ್ದರೆ ಈಗಲಾದರೂ ಮನಸ್ಸು ಮಾಡಿ ಕಳ್ಳತನವಾದ ಮಾಲು ಇಂಥಲ್ಲಿ ಮಾರಾಟವಾಗಿರಬಹುದು ಎಂದು ದೂರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಬಹಳ ಹೈಪೋಥೆಟಿಕಲ್ ಆಗಿದೆ.

Sri B. B. SAYANAK.—When was the complaint filed ? Against whom and under what section ?

Sri M. RAJASEKHARA MURTHY.—The complaint has been filed with the police. We have not mentioned any names in that complaint.

ಶ್ರೀ ಕೆ. ಪ್ರಭಾಕರ್.—ಪೋಲೀಸರಿಗೆ ದೂರು ಕೊಡಲಾಗಿದೆ ಎಂದು ಹೇಳಿದ್ದಾರೆ. ಕಳುವಾದದ್ದು ಯಾವತ್ತು, ದೂರು ಕೊಟ್ಟದ್ದು ಯಾವಾಗ ? 15ನೇ ತಾರೀಖು ರಜ ಇತ್ತು, 16ನೇ ತಾರೀಖು ನೋಡಿದಾಗ ಇರಲಿಲ್ಲವೆಂದರೆ 14ನೇ ತಾರೀಖು ಮಾಲು ಇತ್ತು ಎನ್ನುವುದಕ್ಕೆ ಏನು ಪ್ರೂಫ್ ಇದೆ ? 16ನೇ ತಾರೀಖು ಸಾಮಾನು ಹೋಗಿದ್ದರೆ ಅದು ಯಾವ ರೀತಿಯಲ್ಲಿ ಹೋಗಿದೆ, ಬೀಗವನ್ನು ಮುರಿಯಲಾಗಿದೆಯೇ, ಅಥವಾ ಕಟ್ಟಡಕ್ಕೆ ಏನಾದರೂ ಡ್ಯಾಮೇಜ್ ಆಗಿದೆಯೇ ಇಂಥ ಯಾವುದಾದರೂ ಕಾರಣಗಳಿವೆಯೇ ?

ಶ್ರೀ ಎಂ. ರಾಜಶೇಖರ ಮೂರ್ತಿ.—14ನೇ ತಾರೀಖು ಸಾಯಂಕಾಲ ಕಾರ್ಖಾನೆಯನ್ನು ಮುಚ್ಚಿದಾಗ ಮಾಲು ಇತ್ತು. 15ನೇ ತಾರೀಖು ರಜ ಇತ್ತು. 16ನೇ ತಾರೀಖು ಬೆಳಿಗ್ಗೆ 8 ಗಂಟೆಯಲ್ಲಿ ನೋಡಿದಾಗ ಸಾಮಾನು ಇರಲಿಲ್ಲ. 16ನೇ ತಾರೀಖು ಶನಿವಾರ ಎಲ್ಲರನ್ನೂ ವಿಚಾರಣೆ ಮಾಡಿದರು. 17ನೇ ತಾರೀಖು ಭಾನುವಾರವಾದ್ದರಿಂದ, 18ನೇ ತಾರೀಖು ದೂರು ಕೊಟ್ಟಿದೆ.

Sri N. G. HALAPPA.—Has any person been interrogated by the police in this connection ?

Sri M. RAJASEKHARA MURTHY.—It is going on.

ಶ್ರೀ ಎಂ. ಎಸ್. ಕೃಷ್ಣನ್.—ವಿಶ್ವಣ ಮಾಡಿ ಸುಗಂಧ ದ್ರವ್ಯಗಳ ಕಳುವಾಗಿದೆ ಎಂದು ಒಪ್ಪಿದ್ದೀರಿ. ಇದೇ ರೀತಿಯಲ್ಲಿ ಬೆಂಗಳೂರು ಸಾಬೂನು ಕಾರ್ಖಾನೆಯಲ್ಲಿ ತಯಾರಾಗುವ ಸ್ಪೆಷಲ್ ಸಾಬೂನುಗಳು ಸಹ ಮೋರಿಯಲ್ಲಿ ಹೊರಕ್ಕೆ ಹೋಗುತ್ತಿವೆ. ಇದಕ್ಕೆ ಕಾರಣ ಅಲ್ಲಿರುವ ಕೆಲವು ಅಧಿಕಾರಿಗಳು ಮತ್ತು ಮ್ಯಾನೇಜ್‌ಮೆಂಟ್ ಕ್ರೀಯೇಟ್ ಮಾಡಿರುವ ಕಾರ್ಮಿಕರ ಸಂಘವೇನಿದೆ ಅದಕ್ಕೆ ಸಂಬಂಧಪಟ್ಟವರು ಕೆಲವರು ಸಾಮೂಹಿಕವಾಗಿ ಈ ರೀತಿ ಮಾಡುತ್ತಿರುವುದು. ಹೀಗೆ ಸೇರಿ ಕಳವು ಮಾಡುತ್ತಿರುವರೆಂದು ಲೇಬರ್ ಇಲಾಖೆಗೆ ಕಂಪ್ಲೈಂಟ್ ಬಂದಿಲ್ಲವೇ ?

Sri M. RAJASEKHARA MURTHY.—The allegation is baseless.

ಶ್ರೀ ಎನ್. ಎ. ಚನ್ನೇಗೌಡ.—ಒಟ್ಟು ಬೆರೆ ನಾಲ್ಕು ಸಾವಿರ ರೂಪಾಯಿಯಾಗುತ್ತದೆ, ಓಪನ್ ಮಾರ್ಕೆಟ್ಟಿನಲ್ಲಿ ಕೆ.ಜಿ. ಗೆ 5 ಸಾವಿರ ರೂಪಾಯಿ ಬೆಲೆ ಇದೆ. ಬೆಂಗಳೂರು ಸಿಟಿಯಲ್ಲಿರುವ ಸೋಪು ಗಳಿಗೆ ಸಂಬಂಧಪಟ್ಟ ಮಾಲೀಕರಿಗೆ ಇದನ್ನು ಕೊಟ್ಟಿದ್ದಾರೆ, ಬೇರೆ ಯಾರೂ ಇದನ್ನು ಉಪಯೋಗಿಸು ವುದಕ್ಕಾಗುವುದಿಲ್ಲ. ಇಂಟರಾಗೇಟ್ ಮಾಡಬೇಕಾದರೆ ಯಾವ ಕಡೆಯಿಂದ ಮಾಡಿದರು ? ಯಾರ ಥಾರ್ಡಿನಲ್ಲಿ ಸಾಮಾನಿತ್ತು ಎಂಬುದನ್ನು ಹೇಳುತ್ತೀರಾ ?

Sri M. RAJASEKHARA MURTHY.—The police are conducting the nvestagition ; they are interrogating some of the workers.

ಶ್ರೀ ಹಂಡಿ ಶಿವಣ್ಣ.—ಮಾಲು ಕಳುವಾದಾಗ ಕಾರ್ಖಾನೆಯಲ್ಲಿ ವಾಚ್‌ಮನ್ ಇರಲಿಲ್ಲವೇ ? ಕಾರ್ಖಾನೆ ಗೋಡೆ ಒಡೆದರೇ ಅಥವಾ ಬೀಗ ಮುರಿದರೇ ? ಅಥವ ಕಾರಿನಲ್ಲಿ ತೆಗೆದುಕೊಂಡು ಹೋದರೇ ? ಇದನ್ನು ವಿಚಾರಮಾಡಿದ್ದೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ವರ್ಕರ್ಸ್ ಯಾರಿದ್ದಾರೆ ಅವರನ್ನು ಇಂಟರಾಗೇಟ್ ಮಾಡುತ್ತಿದ್ದಾರೆ ಮತ್ತು ಕಾರ್ಖಾನೆಯಲ್ಲಿ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ವಾಚ್‌ಮನ್ ಇದ್ದಾರೆ. ಅವನನ್ನು ಎನ್‌ಕ್ವೈರಿ ಮಾಡುತ್ತಿದ್ದಾರೆ. These are all matters of detail.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾತಂತ್ರ್ಯದ ದಿನ ವಿಸರ್ಜನ ಮಾಡಿದ ಸುಗಂಧ ದ್ರವಗಳ ಕಳುವು ಆಗಿರುವುದರಿಂದ ಈಗಿರುವ ಸರಕಾರದ ಸುಗಂಧ ಭಾಗ ಕೊಚ್ಚಿ ಹೋಗುತ್ತಿದೆ, ಮೈಸೂರಿನಲ್ಲಿರುವ ಕಾಂಗ್ರೆಸ್ ಸರಕಾರ ಸ್ವಲ್ಪ ತಲೆ ತಗ್ಗಿಸುವ ಹಾಗಾಗಿದೆ ಎಂದು ತಿಳಿಯಬಹುದೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಅವರು ಊಹೆ ಮಾಡುವುದು 15ನೆಯ ತಾರೀಖು ಕಳುವು ಆಗಿದೆ ಎಂದು. 14ನೆಯ ತಾರೀಖೇ ಏಕೆ ಆಗಿರಬಾರದು ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—27 ಕಿರೋಗ್ರಾಂ ಕಳುವಾಗಿತ್ತೆಂದು ಒಪ್ಪಿದ್ದೀರಿ ಈ ರೀತಿ ಕಳ್ಳತನ ಹಿಂದೆ ಆಗಿತ್ತೇ ?

ಶ್ರೀ ಎಂ. ರಾಜಶೇಖರಮೂರ್ತಿ.—ಸೋಪಿನ ಕಾರ್ಖಾನೆ ಪ್ರಾರಂಭವಾಗಿ ಬಹಳ ವರ್ಷಗಳಾಗಿವೆ. ಯಾವ ವರ್ಷ ಎಂದು ಹೇಳಿದರೆ ತಿಳಿಸಬಹುದು.

ಉಪಾಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY

(but not taken up)

Information Centre at Nittur

483. Sri PRABHU RAO JAGADALE (Hulsoor).—

Will the Minister for Industries, Information and Publicity be pleased to state :—

(*a*) since when the proposal to construct an Information Centre at Nittur, District Bidar is pending consideration ;

(*b*) steps taken to expedite its construction ?

Sri M. RAJASEKHARA MURTHY (Minister for Industries, Information and Publicity).—

(*a*) There is no proposal to set up an Information Centre at Nittur, Bidar District.

(*b*) Does not arise in view of reply to (*a*),